**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ**
**ನ್ಯಾಯಾಲಯ, ಕನಕಪುರ**

**<u>ಸಿ.ಸಿ ನಂ. 500/2021</u>**

ದಿನಾಂಕಃ**. 26.03.2026** ರಂದು ಸಾಕ್ಷಿಗೆ ಮದ್ಯಾಹ್ನ **12.10** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

| ಚಾಸಾ-**2** | ಪ್ರಾಸಾ-**2** |
|---|---|
| ಹೆಸರು | - ಕಿರಣ್ |
| ಗಂಡನ ಹೆಸರು | - ಬಸವರಾಜು ಕೆ.ವಿ. |
| ವಯಸ್ಸು | - **26** |
| ಉದ್ಯೋಗ | - ವ್ಯವಸಾಯ |
| ವಿಳಾಸ | - ಕಬ್ಬಾಳು ಗ್ರಾಮ |

**<u>ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-</u>**

ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಪರಿಚಯ. ಅವರು ಅವರು ನನ್ನ ಸಂಬಂಧಿಕರು. ಚಾಸಾ-**1** ನನ್ನ ತಾಯಿ , ಚಾ.ಸಾ. **3** ನನ್ನ ತಂದೆ ಚಾ.ಸಾ. **4** ರಿಂದ **7** ಗ್ರಾಮಸ್ಥರು.

ಆರೋಪಿತರು ಮತ್ತು ನಮ್ಮ ನಡುವೆ ಗಲಾಟೆ ಆಗಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>

ದಿ. **07.12.2020** ರಂದು ಬೆಳಗ್ಗೆ **7.30** ಗಂಟೆಗೆ ಕಂ ಸಾಗರದಲ್ಲಿರುವ ಸ ನಂ **34/1** ರ ನಮ್ಮ ಜಮೀನಿನಲ್ಲಿ ಆರೋಪಿತರು ನನಗೆ ಮತ್ತು ಚಾ.ೃಸಾ. **1** ಮತ್ತು **3** ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅತಿಕ್ರಮ ಪ್ರವೇಶ ಮಾಡಿ **3** ನೇ ಆರೋಪಿ

ದೊಣ್ಣೆಯಿಂದ ಚಾ.ಸಾ. **1** ರವರ  ಕೈಗೆ, ಕೆಳಹೊಟ್ಟೆಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು **2** ನೇ ಆರೋಪಿ ನನಗೆ, ತಾನು ತಂದಿದ್ದ ದೊಣ್ಣೆಯಿಂದ ಎಡಮೊಣಕೈಗೆ, ಕುತ್ತಿಗೆಗೆ ಹೊಡೆದು ತರಚಿದ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು **1** ಮತ್ತು **4** ನೇ ಆರೋಪಿತರು ಚಾ.ಸಾ. **3** ರವರಿಗೆ ಕೈಗಳಿಂದ ಹೊಡೆದು ಕೆಳಕ್ಕೆ ಬೀಳಿಸಿ ಕಾಲುಗಳಿಂದ ಒದ್ದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು ಮತ್ತು ಜಮೀನಿನಿಂದ ಪೈಪುಗಳನ್ನು ಹೊಡೆದು ಹಾಕಿ ನಮಗೆ ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ.

ಸಾಕ್ಷಿಗೆ ದಿಃ **20.12.2020** ರಂದು ಅವನು ಪೊಲೀಸರಿಗೆ ನೀಡಿದ ಎಂಬ ಹೇಳಿಕೆಯ ಭಾಗವಾದ "ನಮಗೆ ಕಂಸಾಗರ . .......ಕೋರುತ್ತೇನೆ ", ಓದಿ ಹೇಳಿದಾಗ ಅಲ್ಲಗಳೆದಿದ್ದರಿಂದ ಸದರಿ ಹೇಳಿಕೆ ಭಾಗವನ್ನು **ನಿಪಿ-3** ಎಂದು ಗುರುತಿಸಲಾಯಿತು.

ಆರೋಪಿತರೊಂದಿಗೆ ಯೊಂದಿಗೆ ರಾಜಿ ಮಾಡಿಕೊಂಡಿರುವ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ. ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಮದ್ಯಾಹ್ನ **12.15** ಗಂಟೆಯವರೆಗೆ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**